ಈಗ ಇಪ್ಪತ್ತೈದು ವರ್ಷದ ಆಯಸ್ಸು ಕೊಡಿ. ಆಮೇಲೆ ಮತ್ತೆ ನೋಡಿಕೊಳ್ಳೋಣ. ಕಾಲ ಕಳೆದಂತೆ ಆಯಸ್ಸಿನ ರೇಟು ಕಡಿಮೆ ಆದರೂ ಆಗಬಹುದು' ಎಂದು ಹೇಳಿ ಅಸಲಿ ವ್ಯಾಪಾರಿಯಂತೆ ಮಾತನಾಡಿದ. ಅವನು ಪ್ರವಾದಿಯವರಲ್ಲಿ ಮತ್ತೊಂದು ಪ್ರಶ್ನೆ ಎಸೆದ. 'ದೈವ ಸ್ವರೂಪಿಗಳೇ, ನಾನೇನೋ ಆಯಸ್ಸು ಖರೀದಿಸಿ ಇಪ್ಪತ್ತೈದು ವರ್ಷ ಹೆಚ್ಚು ಬದುಕಬಲ್ಲೆ. ಆದರೆ ನನ್ನ ಹೆಂಡತಿ ಮುದುಕಿಯಾಗುತ್ತಲೇ ಹೋಗುತ್ತಾಳೆ. ನನ್ನ ದೈಹಿಕ ತೃಷೆಯ ಪಾಡೇನು? ಹೀಗೆ ಆಯಸ್ಸಿನ ಪಲ್ಲಟ ವಿಷಮ ದಾಂಪತ್ಯಕ್ಕೆ ಕಾರಣವಾದರೆ ಹೇಗೆ?' ಎಂದ. 'ನಿಮ್ಮ ಶ್ರೀಮತಿಯವರೂ ಆಯಸ್ಸು ಹೆಚ್ಚಿಸಿಕೊಳ್ಳುವುದೊಂದೇ ಮಾರ್ಗ' ಎಂದು ಪ್ರವಾದಿಯ ಸಹಚರರು ಸಲಹೆ ಕೊಟ್ಟರು.

ಅರವತ್ತು ವರ್ಷದ ಆ ಹಿರಿಯ, ಪ್ರವಾದಿಯನ್ನೂ ಬಿಡದೆ ಕುಹಕವಾಡಿದ್ದನು. ಒಬ್ಬ ಪತ್ನಿಗೆ ವಯಸ್ಸಾದರೆ ಅವನು ಚಿಂತಿಸುತ್ತಿರಲಿಲ್ಲ. ಅವನಿಗೆ ಬೇರೆ ಬೇರೆ ದೇಶಗಳಲ್ಲಿ ಬೇರೆ ಬೇರೆ ವಯಸ್ಸಿನ ಅನೇಕ ಉಪಪತ್ನಿಯರಿದ್ದರು. ಅವನೊಬ್ಬ ಯಾರನ್ನೂ ಲಕ್ಷಿಸದ ಗುಂಡರಗೋವಿಯಾಗಿದ್ದ. ಶ್ರೀಮಂತಿಕೆಯ ಮದ ಅವನ ಧಮನಿ ಧಮನಿಗಳಲ್ಲಿತ್ತು. ಅವನೇನು ಹಣ ಖರ್ಚು ಮಾಡಿ ಹೆಂಡತಿಗೆ ಆಯಸ್ಸು ಕೊಳ್ಳಲಿಲ್ಲ.

ಅಷ್ಟರಲ್ಲಿ ಒಬ್ಬ ಬಡ ಮುದುಕ ಎಲ್ಲರ ಕಣ್ಣು ತಪ್ಪಿಸಿ ಪ್ರವಾದಿ ಎದುರು ಬಂದು 'ದೇವರೇ, ನನ್ನ ಮಗನಿಗೆ ಅನ್ಯಾಯವಾಗಿ ಜೈಲಾಗಿತ್ತು. ಅನೇಕ ವರ್ಷಗಳ ನಂತರ ಇನ್ನು ನಾಲ್ಕು ದಿನಗಳಲ್ಲಿ ಮನೆಗೆ ಬರುವವನಿದ್ದಾನೆ. ಬಡವರಾದ ನಮಗೆ ಆಧಾರವಾಗಲಿದ್ದಾನೆ. ಆದರೆ ನನ್ನ ಆರೋಗ್ಯ ಏಕೋ ಕೈಕೊಡುತ್ತಿದೆ. ಕಷ್ಟಪಟ್ಟು ಉಸಿರಾಡುತ್ತಿದ್ದೇನೆ. ಮಗ ಬರುವವರೆಗೆ ಆರು ದಿನವಾದರೂ ಜೀವ ಹಿಡಿದುಕೊಂಡಿರಲು ಸಹಾಯ ಮಾಡು ಪವಿತ್ರಾತ್ಮನೆ. ನನ್ನಲ್ಲಿರುವ ಹಣವನ್ನು ಒಪ್ಪಿಸಿಕೋ. ಹೊಟ್ಟೆ ಬಟ್ಟೆಗೇ ಇಲ್ಲದ ನಾನು ಹಣ ಹೇಗೆ ಕೂಡಿಡಲಿ? ಯಾವುದೋ ಶ್ರೀಮಂತನ ಬಳಿ ಹತ್ತು ಸಾವಿರ ರೂಪಾಯಿ ಮೀಟರ್ ಬಡ್ಡಿಯ ಮೇಲೆ ತಂದಿದ್ದೇನೆ. ಒಪ್ಪಿಸಿಕೋ ಪ್ರಭುವೇ' ಎಂದನು. ಆದರೆ ಪ್ರವಾದಿಯ ಸಿಬ್ಬಂದಿ 'ಯಾರೋ ನಿನ್ನನ್ನು ಒಳಗೆ ಬಿಟ್ಟವರು ಭಿಕಾರಿ? ಕನಿಷ್ಠ ಆರು ತಿಂಗಳ ಆಯಸ್ಸನ್ನು ಖರೀದಿಸು ಇಲ್ಲವೇ ತೊಲಗು' ಎಂದರು. ಆ ಹಿರಿಯ 'ಅಯ್ಯೋ ದೇವರೇ, ಕರುಣಾಮಯಿಯೇ, ಆರು ದಿನವಾಗದಿದ್ದರೆ ಐದು ದಿನಗಳ ಆಯಸ್ಸನ್ನಾದರೂ ಕೊಡು. ಅದೂ ಆಗದಿದ್ದರೆ ಮಗ ಬಂದಾಗ ಹಾಗೆ ನೋಡಿ ಹೀಗೆ ಕಣ್ಣು ಮುಚ್ಚುತ್ತೇನೆ. ಅಷ್ಟಾದರೂ ಕರುಣಿಸು' ಎಂದು ದೂರದಿಂದಲೇ ಅಡ್ಡಬಿದ್ದ. ಕಣ್ಣೀರು ಹಾಕುತ್ತ ಕೇಳಿಕೊಳ್ಳುತ್ತಿದ್ದ ಅವನನ್ನು ಪ್ರವಾದಿಯ ಸಿಬ್ಬಂದಿ ಹೊರಗಟ್ಟಿದರು.

ಆಯಸ್ಸು ಕೋರಿ ಬರುತ್ತಿದ್ದ ಎಲ್ಲ ಶ್ರೀಮಂತರೂ ತಮ್ಮ ಸಿರಿತನವನ್ನು ಜೋಪಾನ ಮಾಡಿಕೊಳ್ಳುವುದು, ಮತ್ತಷ್ಟು ವೃದ್ಧಿಸಿಕೊಳ್ಳುವುದು ಮತ್ತು ಸಾಯುವ ಕೊನೆ ಕ್ಷಣದವರೆಗೂ ಐಹಿಕ ಸುಖಗಳಲ್ಲಿ ಮುಳುಗಿರುವುದು ಮುಖ್ಯ ಗುರಿಯಾಗಿಸಿಕೊಂಡಿದ್ದರು. ಒಬ್ಬೇ ಒಬ್ಬ ಶ್ರೀಮಂತನೂ ಸಹ ತನ್ನ ತಂದೆ ತಾಯಿ ಅಥವಾ ಮಕ್ಕಳಿಗೆ ಒಂದೇ ಒಂದು ನಿಮಿಷದ ಆಯಸ್ಸು ದಾನ ಮಾಡಲು ಒಪ್ಪಲಿಲ್ಲ. ಆದರೆ ದಾನಿಗಳೆಲ್ಲರೂ ಕಡ್ಡಾಯವಾಗಿ ಬಡವರೂ ಮತ್ತು ನಿರ್ಗತಿಕರಾಗಿದ್ದರು. ಕೆಲವು ಶ್ರೀಮಂತರು ಬಡವರನ್ನು ಅಪಹರಿಸಿ ತಂದು ಚಿಕ್ಕಾಸೂ ಸಹ ಕೊಡದೆ ಜಬರ್ದಸ್ತು ಮಾಡಿ ಆಯಸ್ಸು ವರ್ಗಾವಣೆ ಮಾಡಿಸಿಕೊಂಡರು. ಪ್ರವಾದಿಗೆ ಹಣ ವರ್ಗಾವಣೆ ಆಯಿತೇ ವಿನಹ ಅನೇಕ ದಾನಿಗಳು ಬರಿಗೈಯಲ್ಲಿ ಮನೆ ಸೇರಿದರು. ಪ್ರವಾದಿ ಮತ್ತು ಸಹಚರರ ಚಾಲಾಕಿತನದಿಂದ ಕೆಲವು ಬಡವರು ಒಬ್ಬೊಬ್ಬರೂ ನೂರಾರು ವರ್ಷಗಳ ಆಯಸ್ಸನ್ನು ದಾನ ಮಾಡಿದರು. ಏಕೆಂದರೆ ಅವರು ಹತ್ತಾರು ಸಲ ವಯಸ್ಸು ವರ್ಗಾವಣೆಗೆ ಒಳಪಟ್ಟಿದ್ದರು. ಶ್ರೀಮಂತರ ಮನೆಯ ಪುಕ್ಕಲು ಅಳುಗಳು ನಗರವನ್ನೇ ತೊರೆದರು.

ಮೋಸ ಹೋಗಿದ್ದ ಮುಗ್ಧರೂ ಅವಿದ್ಯಾವಂತರೂ ಆಗಿದ್ದ ದಾನಿಗಳು ಆಯಸ್ಸನ್ನು ದಾನ ಮಾಡಿ ತಾವು ಯಾವುದೇ ಕ್ಷಣದಲ್ಲಿ ಸಾಯಬಹುದೆಂದು ಬೆದರಿ ಸಾವಿನ ಕ್ಷಣಗಣನೆ ಮಾಡುತ್ತ ಜೀವಂತ ಶವಗಳಂತೆ ನಡೆದಾಡತೊಡಗಿದರು. ಅವರ ಹೆಂಡತಿ ಮಕ್ಕಳು ಅಪ್ಪ ಅಮ್ಮಂದಿರು ದಾನಿಗಳು ಯಾವ ಕ್ಷಣದಲ್ಲಿ ಸಾಯುವರೋ ಎಂದು ಹೆದರಿ ಕುಂತಲ್ಲಿ, ನಿಂತಲ್ಲಿ, ಮಲಗಿದಾಗ, ಮಕ್ಕಳು ಮರಿಗಳನ್ನು ಆಡಿಸುವಾಗ, ರಸ್ತೆ ದಾಟುವಾಗ, ಎರಡಕ್ಕೆ ಕುಳಿತಾಗ ಸಹ ಗುಮಾನಿಯಿಂದ ಗಮನಿಸತೊಡಗಿದರು. ಸಾಯುವ ಭಯ ಮತ್ತು ದುಃಖದಲ್ಲಿ ದಾನಿಗಳು ಮತಿಭ್ರಮಣೆಯಾದವರಂತೆ